C.R.P.67

Form No.4 (Civil)
Deposition Sheets
(R.P.No.57)

## 6 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,
## ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.

## ಎಸ್ ಸಿ ಸಂಖ್ಯೆ: 277/2018

**ಪ್ರಾಸಾ.8 ಚಾಸಾ.12**

**ಸಾಕ್ಷಿದಾರರ ಹೆಸರು** : ಮಂಜುನಾಥ ಎಮ್

**ತಂದೆಯ ಹೆಸರು** : ಮುನಿರಾಜಯ್ಯ

**ವಯಸ್ಸು** : 27 ವರ್ಷಗಳು

**ಉದ್ಯೋಗ** : ಫ್ಲವರ್ ಡಿಕೋರೇಷನ್ ಕೆಲಸ

**ವಾಸ** : ರಾಜರಾಜೇಶ್ವರಿನಗರ, ಬೆಂಗಳೂರು.

## ಪ್ರಮಾಣ ವಚನ ಬೋಧಿಸಿದ ದಿನಾಂಕ: 04.09.2023

## ಮುಖ್ಯ ವಿಚಾರಣೆ: ಮಾನ್ಯ ಸರ್ಕಾರಿ ಅಭಿಯೋಜಕರಿಂದ:

ನ್ಯಾಯಾಲಯದ ಮುಂದೆ ಇರುವ 1 ನೇ ಆರೋಪಿಯನ್ನು ನಾನು ನೋಡಿರುವುದಿಲ್ಲ. 2017 ರಲ್ಲಿ ನಾನು ಮೆಕಡೋನಾಲ್ಡ್ಸ್ ನಲ್ಲಿ ಕೆಲಸ ಮಾಡಿಕೊಂಡಿದ್ದೆ. 2017 ರಲ್ಲಿ ನನ್ನ ಬಳಿ ಮೊಬೈಲ್ ಫೋನ್ ಇತ್ತು. 2017 ರಲ್ಲಿ ಸಿಮ್ ಖರೀದಿ ಮಾಡಲು ರಿಚಮುಂಡ್ ಸರ್ಕಲ್ ಬಳಿ ಇರುವ ಐ.ಡಿ.ಐ. ಕಂಪನಿಗೆ ಹೋಗಿರಲಿಲ್ಲ.

2. ದಿನಾಂಕ 10.12.2017 ರಂದು ಪೊಲೀಸರು ನನ್ನನ್ನು ಕಗ್ಗಲೀಪುರ ಪೊಲೀಸ್ ಠಾಣೆಗೆ ಕರೆದುಕೊಂಡು ಹೋಗಿದ್ದರು. ಪೊಲೀಸರು ನಿನ್ನ ಸಿಮ್ ನ್ನು ಬೇರೆ ಯಾರಿಗಾದರೂ ಕೊಟ್ಟಿದ್ದೀಯಾ ಎಂದು ವಿಚಾರಿಸಿದರು. ಆಗ ನಾನು ಯಾರಿಗೂ ಕೊಟ್ಟಿಲ್ಲ ಎಂದು ಹೇಳಿದ್ದೆ.

ಪೊಲೀಸರವರು ನನ್ನ ಆಧಾರ್ ಕಾರ್ಡ್ ಲಿಂಕ್ ಆಗಿರುವ ಸಿಮ್ ನ್ನು ಬಳಸಿಕೊಂಡು ಒಂದು ಕೊಲೆ ಮಾಡಿರುತ್ತಾರೆ ಎಂದು ತಿಳಿಸಿದರು. ಕೊಲೆಯಾದ ವ್ಯಕ್ತಿ ಯಾರು ಎಂದು ನನಗೆ ಗೊತ್ತಿಲ್ಲ. ಅದಾದ ನಂತರ ನಾನು ಕಗ್ಗಲೀಪುರ ಪೊಲೀಸ್ ಠಾಣೆಗೆ ಹೋಗಿರುವುದಿಲ್ಲ. ಈ ಕೇಸಿನ ವಿಚಾರ ನನಗೆ ಗೊತ್ತಿರುವುದಿಲ್ಲ. ಪೊಲೀಸರು ಸಹ ನನಗೆ ಈ ಕೇಸಿನ ವಿಚಾರವನ್ನು ತಿಳಿಸಿರುವುದಿಲ್ಲ. ನಾನು ಪೊಲೀಸರ ಮುಂದೆ ಹೇಳಿಕೆಗಳನ್ನು ನೀಡಿರುವುದಿಲ್ಲ.

**(ಈ ಹಂತದಲ್ಲಿ ಮಾನ್ಯ ಸರ್ಕಾರಿ ಅಭಿಯೋಜಕರು ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದಾರೆ. ಕಡತದಲ್ಲಿರುವ ಅಂಶಗಳನ್ನು ಪರಿಗಣಿಸಲಾಗಿ ಸಾಕ್ಷಿದಾರರು ಅಭಿಯೋಜನೆಯ ಕೇಸಿಗೆ ವಿರುದ್ಧವಾಗಿ ಸಾಕ್ಷಿ ನುಡಿಯುತ್ತಿರುವುದು ಕಂಡುಬರುತ್ತದೆ. ಈ ಕಾರಣದಿಂದ ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಅವರನ್ನು ಪಾಟೀ ಸವಾಲಿಗೆ ಒಳಪಡಿಸಲು ಮಾನ್ಯ ಸರ್ಕಾರಿ ಅಭಿಯೋಜಕರಿಗೆ ಅನುಮತಿ ನೀಡಲಾಯಿತು)**

**ಪಾಟೀ ಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ:**

1. ನಾನು ಒಂದು ಕಾರ್ಪೋರೇಟ್ ಮೊಬೈಲ್ ಸಿಮ್ ನ್ನು ಖರೀದಿ ಮಾಡಲು ರಿಚ್ ಮಂಡ್ ಸರ್ಕಲ್ ಬಳಿ ಇರುವ ಐ.ಡಿ.ಐ ಕಂಪನಿಗೆ ಹೋಗಿ, ಸಿಮ್ ಕಾರ್ಡ್ ಪಡೆದುಕೊಳ್ಳಲು ನನ್ನ ಆಧಾರ್ ಕಾರ್ಡ್ ನ್ನು ನೀಡಿದೆನು ಎಂದರೆ ಸರಿಯಲ್ಲ. ಅಲ್ಲಿ ಕೆಲಸ ಮಾಡುತ್ತಿದ್ದ 1 ನೇ ಆರೋಪಿ ಅಸಲು ದಾಖಲಾತಿ ಬೇಕೆಂದು ಹೇಳಿದನು, ಸಿಮ್ ಅರ್ಜೆಂಟ್ ಆಗಿ ಬೇಕು ಎಂದು ಹೇಳಿದರು ಕೇಳಲಿಲ್ಲ, ನಾನು ಆಧಾರ್ ಕಾರ್ಡ್ ನ್ನು ನಂತರ ಕೊಡುವುದಾಗಿ ತಿಳಿಸಿ ವಾಪಸ್ ಬಂದೆನು ಎಂದರೆ ಸರಿಯಲ್ಲ.

2. ನಂತರ ದಿನಾಂಕ 11.12.2017 ರಂದು ಕಗ್ಗಲೀಪುರ ಪೊಲೀಸರವರು ತಮ್ಮ ಠಾಣಾ ವ್ಯಾಪ್ತಿಯಲ್ಲಿ ಮೃತನನ್ನು ಯಾರೋ ದುಷ್ಕರ್ಮಿಗಳು ಕೊಲೆ ಮಾಡಿ ಹೊರಟು ಹೋಗಿದ್ದಾರೆ, ಮೃತನ ಮೊಬೈಲ್ ಗೆ 9964244764 ನಂಬರ್ ನಿಂದ ಕರೆ ಬಂದಿದ್ದು, ಈ ಬಗ್ಗೆ ಠಾಣೆಗೆ ಹಾಜರಾಗಿ ಹೇಳಿಕೆ ನೀಡುವಂತೆ ತಿಳಿಸಿದರು ಎಂದರೆ ಸರಿಯಲ್ಲ. ಅದರಂತೆ ನಾನು ಠಾಣೆಗೆ ಹಾಜರಾಗಿ ಮೃತನ ಫೋಟೋವನ್ನು ನೋಡಿದೆ. ಆತ ಯಾರು ಎಂದು ನನಗೆ ಗೊತ್ತಾಗಲಿಲ್ಲ. ಸದರಿ ನಂಬರ್ ನ ಸಿಮ್ ನ್ನು ನಾನು ಖರೀದಿ ಮಾಡಿರುವುದಿಲ್ಲ, ನನ್ನ ಆಧಾರ್ ಕಾರ್ಡ್ ನ್ನು ಯಾರೋ ಸಂಗ್ರಹಿಸಿ ನನ್ನ ಹೆಸರಿನಲ್ಲಿ ಸಿಮ್ ನ್ನು ಪಡೆದು ಈ ಕೃತ್ಯ ಎಸೆಗಿರಬಹುದು ಎಂದು, ಈ ಹಿಂದೆ ನಾನು ಐ.ಡಿ.ಐ ಕಂಪನಿಯಲ್ಲಿ ಸಿಮ್ ನ್ನು ಖರೀದಿ ಮಾಡಲು ಹೋದಾಗ ನನ್ನ ನಕಲು ಆಧಾರ್ ಕಾರ್ಡ್ ನ್ನು ಪಡೆದುಕೊಂಡ 1 ನೇ ಆರೋಪಿ ಶಿವಬಸವೇಗೌಡ ನನ್ನ ಆಧಾರ್ ಕಾರ್ಡ್ ನ್ನು ದುರ್ಬಳಕೆ ಮಾಡಿಕೊಂಡಿರಬಹುದು, ಅವರ ಮುಖ ನನಗೆ ಚೆನ್ನಾಗಿ ಜ್ಞಾಪಕವಿದೆ, ಏಕೆಂದರೆ ಅವನು ನನಗೆ ಸಿಮ್ ಗಾಗಿ ಹೆಚ್ಚಿಗೆ ಮಾತನಾಡಿದರು ಕೊಟ್ಟಿರಲಿಲ್ಲ ಎಂದು ನಾನು ಪೊಲೀಸರ ಮುಂದೆ ದಿನಾಂಕ 11.12.2017 ರಂದು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ.

3. ನನಗೆ ಈಗ ಓದಿ ಹೇಳಿದ ರೀತಿ ಅಂದರೆ (ಈ ಹಿಂದೆ -------------ಕೋರುತ್ತೇನೆ) ಎಂದು ಪೊಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಅಲ್ಲಗಳೆದ ಹೇಳಿಕೆಯ ಭಾಗವನ್ನು ನಿಪಿ.12 ಎಂದು ಗುರುತಿಸಲಾಯಿತು.

4. ನಂತರ ದಿನಾಂಕ 21.12.2017 ರಂದು ನಾನು ಪೊಲೀಸರ ಮುಂದೆಮರು ಹೇಳಿಕೆ

ನೀಡಿರುತ್ತೇನೆಎಂದರೆ ಸರಿಯಲ್ಲ. ಸದರಿ ಹೇಳಿಕೆಯಲ್ಲಿ ಆರೋಪಿಯನ್ನು ಪೊಲೀಸರವರು ದಸ್ತಗಿರಿ ಮಾಡಿರುವ ವಿಚಾರ ತಿಳಿದು, ಠಾಣೆಗೆ ಬಂದು ಆರೋಪಿಯನ್ನು ನೋಡಿದೆ ಎಂದರೆ ಸರಿಯಲ್ಲ. ಆರೋಪಿ ಈ ಹಿಂದೆ ರಿಚ್ ಮಂಡ್ ಸರ್ಕಲ್ ನಲ್ಲಿದ್ದ ಐ.ಡಿ.ಐ ಕಂಪನಿಯಲ್ಲಿ ಸಿಮ್ ನ್ನು ಖರೀದಿ ಮಾಡಲು ನನ್ನಿಂದ ಆಧಾರ್ ಕಾರ್ಡ್ ನ ಜೆರಾಕ್ಸ್ ಪಡೆದುಕೊಂಡಿದ್ದು, ಅಸಲು ದಾಖಲಾತಿ ಬೇಕೆಂದು ಜೋರು ಮಾಡಿ ಕಳುಹಿಸಿದ ಈತನೇ ಆಗಿರುತ್ತಾನೆ ಎಂದು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ನಂತರ 1 ನೇ ಆರೋಪಿಯಿಂದ ವಿಚಾರ ತಿಳಿಯಲಾಗಿ, ತನ್ನ ಜೊತೆ ಕೆಲಸ ಮಾಡುತ್ತಿದ್ದ ನೇತ್ರಾ ಎಂಬ ಹುಡುಗಿಗೆ ಮೃತನ ಜೊತೆ ಎಂಗೇಜ್ ಮೆಂಟ್ ಆಗಿದ್ದು, ಆರೋಪಿ ಆಕೆಯನ್ನು ಪ್ರೀತಿಸುತ್ತಿದ್ದು, ಆದರೆ ಸದರಿ ನೇತ್ರಾ ಆರೋಪಿಯ ಪ್ರೀತಿಯನ್ನು ನಿರಾಕರಿಸಿದ್ದಳು, ನೇತ್ರಾ ಎಂಗೇಜ್ ಮೆಂಟ್ ಫೋಟೋಗಳನ್ನು ಆಫೀಸ್ ನಲ್ಲಿರು ಎಲ್ಲರಿಗೂ ತೋರಿಸಿ ತುಂಬಾ ಖುಷಿ ಆಗಿದ್ದಳು, ಅದನ್ನು ನೋಡಿ ನನಗೆ ಸಹಿಸಲು ಆಗಲಿಲ್ಲ, ಆ ಕಾರಣ ಮೃತನನ್ನು ಕೊಲೆ ಮಾಡಿದರೆ ವಿಧಿ ಇಲ್ಲದೆ ನೇತ್ರಾ ನನ್ನೊಂದಿಗೆ ಬರುತ್ತಾಳೆ ಎಂದು ತಿಳಿದು, ಮೃತ ಅನೀಲ್ ನನ್ನು ಕೊಲೆ ಮಾಡಲು ನಿರ್ಧರಿಸಿದೆ, ಅದರಂತೆ ಒಂದು ಕಡಿಮೆ ಬೆಲೆಯ ಮೊಬೈಲ್ ಹ್ಯಾಂಡ್ ಸೆಟ್ ನ್ನು ಖರೀದಿ ಮಾಡಿ, 2 ನೇ ಆರೋಪಿಯನ್ನು ಪರಿಚಯ ಮಾಡಿಕೊಂಡು, ನನ್ನ ಹೆಸರಿನಲ್ಲಿದ್ದ ಆಧಾರ್ ಕಾರ್ಡ್ ನ್ನು ಕೊಟ್ಟು ಸಿಮ್ ಖರೀದಿ ಮಾಡಿ, ಸದರಿ ಸಿಮ್ ನಿಂದ ಮೃತನಿಗೆ ಕರೆ ಮಾಡಿ, ನಾನು ಹಾಸನದ ಕಡೆಯವನೆಂದು ಪರಿಚಯ ಮಾಡಿಕೊಂಡು, ಸ್ನೇಹ ಬೆಳೆಸಿಕೊಂಡು, ನಂತರ ಅನೀಲ್ ಗೆ ಎಲೆಕ್ಟ್ರಿಕ್ ಶಾಕ್ ಹೊಡೆಸಿ ಕೊಲೆ ಮಾಡೋಣ ಎಂದು ನಿರ್ಧರಿಸಿ, ಅದಕ್ಕೆ ಬೇಕಾದ ವೈಯರ್, ಕಟರ್ ಮತ್ತು ಗ್ಲೌಸ್‌ಗಳನ್ನು ಖರೀದಿ ಮಾಡಿ, ದಿನಾಂಕ 03.12.2017 ರಂದು ತನ್ನ ಬೈಕ್ ನಲ್ಲಿ ಅನೀಲ್ ನನ್ನು ಉತ್ತರಿ ಗ್ರಾಮದ ನಿರ್ಜನ ಪ್ರದೇಶಕ್ಕೆ

ಕರೆದುಕೊಂಡು ಬಂದು, ಅವನಿಗೆ ಗೊತ್ತಾಗದಂತೆ ಅನೀಲ್ ಮೊಬೈಲ್ ನಲ್ಲಿ ಮಾತನಾಡುವಾಗ ಹೈಟೇನಷನ್ ಎಲೆಕ್ಟ್ರಿಕ್ ಕಂಬದ ವೈಯರಿಗೆ ನಾನು ತಂದಿದ್ದ ವೈಯರಿನ ಒಂದು ತುದಿಯನ್ನು ಸಿಗಿಸಿ ಮತ್ತೊಂದು ತುದಿಯನ್ನು ಚಿಕ್ಕ ಗಳದ ತುದಿಗೆ ಕಟ್ಟಿ, ಅನೀಲ್ ಗೆ ಹಿಂಬದಿಯಿಂದ ತಲೆಗೆ ಜೋರಾಗಿ ತಾಗಿಸಿದೆನು, ಆಗ ಅನೀಲ್ ಗೆ ಕರೆಂಟ್ ಹೊಡೆದು ಸತ್ತು ಹೋದನು, ನಂತರ ಆತನು ಸತ್ತಿರುವುದನ್ನು ಖಚಿತಪಡಿಸಿಕೊಂಡು ಅಲ್ಲಿಂದ ಹೊರಟು ಹೋದೆನು ಎಂದು ತಿಳಿಸಿದ ಎಂದರೆ ಸರಿಯಲ್ಲ.

5. ನನಗೆ ಈಗ ಓದಿ ಹೇಳಿದ ರೀತಿ ಅಂದರೆ (ಈ ದಿನ ಕಗ್ಗಲೀಪುರ ಪೊಲೀಸರು -------------ಗುರುತಿಸುತ್ತೇನೆ) ಎಂದು ಪೊಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಅಲ್ಲಗಳೆದ ಹೇಳಿಕೆಯ ಭಾಗವನ್ನು ನಿಪಿ.13 ಎಂದು ಗುರುತಿಸಲಾಯಿತು. ನಾನು ಆ ದಿವಸ ಸಿಮ್ ಕಾರ್ಡ್ ಪಡೆದುಕೊಳ್ಳಲು ನ್ಯಾಯಾಲಯದ ಮುಂದೆ ಇರುವ 1 ನೇ ಆರೋಪಿಯನ್ನೇ ಭೇಟಿ ಮಾಡಿದ್ದೆ ಎಂದರೆ ಸರಿಯಲ್ಲ. ನಾನು ಆ ದಿವಸ 1 ನೇ ಆರೋಪಿಯನ್ನು ಭೇಟಿ ಮಾಡಿದ್ದರು ಸಹ, 1 ನೇ ಆರೋಪಿಯನ್ನು ಪೊಲೀಸ್ ಠಾಣೆಯಲ್ಲಿ ನೋಡಿದ್ದರು ಸಹ ಮತ್ತು ಈ ಎಲ್ಲಾ ವಿಚಾರಗಳು ಗೊತ್ತಿದ್ದರೂ ಸಹ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ ಶ್ರೀ ಕೆ.ಜೆ.ಎಸ್. ವಕೀಲರಿಂದ 1 ಮತ್ತು 2 ನೇ ಆರೋಪಿತರ ಪರವಾಗಿಃ</u>**

ಆರೋಪಿತರ ಪರ ವಕೀಲರು ತಮ್ಮದು ಪಾಟೀ-ಸವಾಲು ಇಲ್ಲ ಎಂದು ಹೇಳಿರುತ್ತಾರೆ.

**ಮರು ವಿಚಾರಣೆ ಇಲ್ಲ**

**(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)**

ಓ. ಹೇ. ಕೇ. ಸ. ಒ.

(ರವೀಂದ್ರ. ಆರ್)
6 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.